ವಕ್ಫ್‌ಗೆ ಸಂಬಂಧಿಸಿದ ಆಸ್ತಿಯಲ್ಲಿ ರಸ್ತೆ ನಿರ್ಮಾಣ.

938(1069) ಶ್ರೀ ಹೆಚ್.ಡಿ. ಬಸವರಾಜ್ (ವಿರಾಜಪೇಟೆ) :— ಮಾನ್ಯ ವಕ್ಫ್ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ವಿರಾಜಪೇಟೆ ನಗರದಲ್ಲಿರುವ ವಕ್ಫ್‌ಕ್ಕೆ ಸಂಬಂಧಿಸಿದ ಆಸ್ತಿಯನ್ನು ಕೆಲವರು ಅತಿಕ್ರಮಿಸಿ ಆ ಸ್ಥಳದಲ್ಲಿ ರಸ್ತೆ ನಿರ್ಮಾಣ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ, ಹಾಗಿದ್ದಲ್ಲಿ ಕಾನೂನು ಬಾಹಿರವಾಗಿ ಅತಿಕ್ರಮಿಸಿರುವವರ ವಿರುದ್ಧ ಸರ್ಕಾರ ತೆಗೆದುಕೊಳ್ಳಲಿರುವ ಕ್ರಮಗಳು ಯಾವುವು ;

ಆ) ವಕ್ಫ್ ಸೇರಿದ ಬಿಸ್ಮಿಲ್ಲಾ ಕಾವಲಿ ಮಕಾನಿನಲ್ಲಿ ವಾಸಿಸುತ್ತಿರುವ ಬಡ ಮುಸ್ಲಿಂ ಜನತೆಗೆ ಪಟ್ಟಿ ವಿತರಣೆ ಮಾಡಿರುವ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮವೇನು?

ಶ್ರೀ ಆರ್. ರೋಷನ್ ಬೇಗ್ (ಪ್ರವಾಸೋದ್ಯಮ ಮತ್ತು ವಕ್ಫ್ ರಾಜ್ಯ ಸಚಿವರು) :—

ಅ) ಹೌದು.

ಕರ್ನಾಟಕ ವಕ್ಫ್ ಮಂಡಳಿಯ ಗಮನಕ್ಕೆ ತಾರದೇ ಅನುಮೋದನೆ ಇಲ್ಲದೆ, ಮಸೀದಿ-ಇ-ಆಜಂ, ವಿರಾಜಪೇಟೆ, ಇದರ ಕಾರ್ಯಕಾರಿ ಸಮಿತಿಯವರು ವಿರಾಜಪೇಟೆಯ ಸರ್ವೆ ನಂ. 731 ರಲ್ಲಿ 260x12 ಅಡಿ ಅಳತೆಯ ಜಾಗವನ್ನು ರಸ್ತೆಯನ್ನು ನಿರ್ಮಾಣ ಮಾಡುವ ಸಲುವಾಗಿ ನೀಡಿರುತ್ತಾರೆ. ಈ ಬಗ್ಗೆ ಸಂಸ್ಥೆಯ ಕಾರ್ಯಕಾರಿ ಸಮಿತಿ ವಿರುದ್ಧ ಕ್ರಮವನ್ನು ತೆಗೆದುಕೊಳ್ಳಲಾಗುತ್ತಿದೆ.

ಆ) ಬಿಸ್ಮಿಲ್ಲಾ ಖಾ ವಾಲಿ ಮಕಾನ್ ಖಬರ್‌ಸ್ತಾನ್, ಇದು ವಿರಾಜಪೇಟೆಯಲ್ಲಿರುತ್ತದೆ. ಮಂಡಳಿಯ ಅನುಮೋದನೆ ಇಲ್ಲದೇ ಸ್ಥಳೀಯ ಮುಸ್ಲೀಮರು ಸುಮಾರು ಅರ್ಧದಷ್ಟು ಜಾಗವನ್ನು ಅತಿಕ್ರಮಿಸಿಕೊಂಡು, ಜಾಗದಲ್ಲಿ ಮನೆಗಳನ್ನು ಕಟ್ಟಿರುತ್ತಾರೆ. ಈ ಅತಿಕ್ರಮವಾಗಿ ಅಕ್ರಮಿಸಿರುವ ಜಾಗವನ್ನು ಸಕ್ರಮಗೊಳಿಸುವ ಬಗ್ಗೆ ವಿಷಯವು ಮಂಡಳಿಯ ಪರಿಶೀಲನೆಯಲ್ಲಿದೆ.

ವಕ್ಫ್ ಮಂಡಳಿಯು ಹಕ್ಕು ಪತ್ರ ನೀಡದಿರುವುದು.

939(1170) ಶ್ರೀ ಹೆಚ್.ಡಿ. ಬಸವರಾಜ್ (ವಿರಾಜಪೇಟೆ) :— ಮಾನ್ಯ ವಕ್ಫ್ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

1. ವಿರಾಜಪೇಟೆ ನಗರದಲ್ಲಿರುವ ಬಿಸ್ಮಿಲ್ಲಾಖಾವುಲಿ ಮಖಾನ್‌ನಲ್ಲಿ ಅಲ್ಪ ಸಂಖ್ಯಾತರ ಕುಟುಂಬಗಳು ಮನೆ ನಿರ್ಮಿಸಿಕೊಂಡು ವಾಸಿಸುತ್ತಿದ್ದು ಅವರಿಗೆ ವಕ್ಫ್ ಮಂಡಳಿಯವರು ಹಕ್ಕು ಪತ್ರ ನೀಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;

2. ಹಾಗಿದ್ದಲ್ಲಿ ಸರ್ಕಾರ ಹಕ್ಕುಪತ್ರ ನೀಡುವ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು, ಬಿಸ್ಮಿಲ್ಲಾಷಾವುಲಿ ಮೂನ್‌ನಲ್ಲಿ ಮನೆ ನಿರ್ಮಿಸಿಕೊಂಡು ವಾಸಿಸುತ್ತಿರುವ ಸಂಖ್ಯೆ ಎಷ್ಟು?

ಶ್ರೀ ಆರ್. ರೋಷನ್ ಬೇಗ್ (ಪ್ರವಾಸೋದ್ಯಮ ಮತ್ತು ವಕ್ಫ್ ಸಚಿವರು)

1. ವಿರಾಜಪೇಟೆಯ ಬಿಸ್ಮಿಲ್ಲಾಷಾ ಮಖಾನ್ ಏಬರ್‌ಸ್ಥಾನದ ಜಮೀನಿನಲ್ಲಿ ಕೊನೆಪಕ್ಷ ಅರ್ಧಕ್ಕಿಂತ ಹೆಚ್ಚಿನ ಭಾಗ ಸ್ಥಳೀಯ ಮುಸ್ಲೀಮರು ಒತ್ತುವರಿ ಮಾಡಿ ಸದರಿ ಜಾಗದಲ್ಲಿ ವಕ್ಫ್ ಮಂಡಳಿಯ ಪೂರ್ವಾನುಮತಿ ಇಲ್ಲದೆ. ಪಕ್ಕಾ ಮನೆಗಳನ್ನು ಕಟ್ಟಿರುತ್ತಾರೆ. ಬಗರ್ ಹುಕ್ಕುಂ ಸ್ವಾಧೀನದಾರರನ್ನು ಸಕ್ರಮಗೊಳಿಸುವ ವಿಚಾರ ಮಂಡಳಿಯ ಪರಿಶೀಲನೆಯಲ್ಲಿದೆ.

2. ಮಖಾನ್ ಜಾಗದಲ್ಲಿ ಬಗರ್ ಹುಕ್ಕುಂ ಸ್ವಾಧೀನದಾರರ ವಿರುದ್ಧ ಕ್ರಮ ಜರುಗಿಸುವ ಬಗ್ಗೆ ಒತ್ತುವರಿ ಮಾಡಿ ಮನೆ ಕಟ್ಟಿ ವಾಸ ಮಾಡುತ್ತಿರುವುದು ಎಷ್ಟು ಎಂದು ಗುರ್ತಿಸಿ ಮತ್ತು ಇತರೆ ವಿವರ ವಿಸ್ತೀರ್ಣ ವಾರ್ಷಿಕ ವರಮಾನ ಇತ್ಯಾದಿ ವಿಷಯಗಳೊಳಗೆ"ಂಡಂತೆ ವರದಿ ನೀಡಲು, ಕೊಡಗು ಜಿಲ್ಲಾ ವಕ್ಫ್ ಸಲಹಾ ಸಮಿತಿಯ ಆಡಳಿತಾಧಿಕಾರಿಗಳಿಗೆ ತಿಳಿಸಲಾಗಿದೆ.

ಬಯಲುಸೀಮೆ ಪ್ರದೇಶಾಭಿವೃದ್ಧಿ ಮಂಡಳಿಯಿಂದ ಮಾಗಡಿ ಕ್ಷೇತ್ರದ ಅಭಿವೃದ್ಧಿ.

940(1347) ಶ್ರೀ ಹೆಚ್.ಸಿ. ಬಾಲಕೃಷ್ಣ (ಮಾಗಡಿ) :— ಮಾನ್ಯ ಪ್ರದೇಶಾಭಿವೃದ್ಧಿ ಮತ್ತು ಕಾಡಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) 1996-97, 1997-98 ಮತ್ತು 1998-99ನೇ ಸಾಲಿನಲ್ಲಿ ಬಯಲುಸೀಮೆ ಪ್ರದೇಶಾಭಿವೃದ್ಧಿ ಮಂಡಳಿಯಿಂದ ಮಾಗಡಿ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಯಾವ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ (ಪೂರ್ಣವಿವರ ನೀಡುವುದು).

ಆ) ಅವುಗಳಿಗೆ ತಗುಲಿದ ವೆಚ್ಚ ಎಷ್ಟು?

ಶ್ರೀ ಕೆ. ವೆಂಕಟೇಶ್ (ಪ್ರದೇಶಾಭಿವೃದ್ಧಿ ಮತ್ತು ಕಾಡಾ ರಾಜ್ಯ ಸಚಿವರು) :—

ಅ) ಬಯಲುಸೀಮೆ ಪ್ರದೇಶಾಭಿವೃದ್ಧಿ ಮಂಡಳಿಯ ಮತಿಯಿಂದ ಮಾಗಡಿ ವಿಧಾನಸಭಾ ಕ್ಷೇತ್ರದಲ್ಲಿ 1996-97 1997-98 ಹಾಗೂ 1998-99ನೇ ಸಾಲಿನಲ್ಲಿ ತೆಗೆದುಕೊಳ್ಳಲಾದ ಕಾಮಗಾರಿಗಳ ವಿವರ ಹಾಗೂ ಇವುಗಳಿಗೆ ಮಾಡಲಾದ ವೆಚ್ಚದ ವಿವರಗಳನ್ನು ಅನುಬಂಧ-1 ರಲ್ಲಿ ನೀಡಲಾಗಿದೆ.